ಇದೆಯಂತೆ.. ಈ ಕಾಡು ಪ್ರದೇಶದಲ್ಲಿ ಅವರು ಬಂದರೂ ಏನು ಮಾಡಿಯಾರು..? ಇಲ್ಲಿ ಒಂದು ಹುಲ್ಲು ಕಡ್ಡಿ ಬೆಳೆಸಲು ಎಷ್ಟು ಪಾಡು ಪಡಬೇಕೆಂದು ನಮಗಷ್ಟೇ ಗೊತ್ತು.. ಇಲ್ಲಿ ಲಾಭ ಇಲ್ಲವೆಂದೇ ಈ ಜಾಗದ ಬಗ್ಗೆ ನಿರ್ಲಕ್ಷ್ಯ ತೋರಿಸಿದ್ದಾರೆ..'

ಶಿವಣ್ಣನೂ ಗೆಳೆಯನ ಮಾತನ್ನು ಅನುಮೋದಿಸಿದ.

* * *

ನೀರಿನ ತೊಟ್ಟಿ ತಯಾರಾಯಿತು. ಅದರಲ್ಲಿ ಸಣ್ಣಗೆ ಒಸರೂ ಬಂದಿತು. ಎಲ್ಲರ ನಿರೀಕ್ಷೆ, ಶ್ರಮ ಸಾರ್ಥಕಗೊಂಡದ್ದಕ್ಕೆ ಖುಷಿಪಟ್ಟರು. ಆ ತೊಟ್ಟಿಯಿಂದ ಸಣ್ಣ ಕಾಲುವೆಗಳನ್ನು ತೋಡಿ ಕೃಷಿ ಜಾಗಕ್ಕೆ ಬಿಟ್ಟರು. ಈಗ ನೀರಿನ ಹರಿವು ಸರಾಗವಾಯಿತು. ಬೇಕಾದಾಗ ತೊಟ್ಟಿಯಿಂದ ನೀರು ಬಿಟ್ಟು ಬೇಡದಾಗ ಅದಕ್ಕೊಂದು ತಡೆ ಇರಿಸುವ ವ್ಯವಸ್ಥೆ ಮಾಡಿದರು. ಮಳೆಗಾಲಕ್ಕೆ ನೀರು ತೊಟ್ಟಿಯಿಂದಲೂ ಮೇಲೇರಿ ಬಂದರೆ, ಅದಕ್ಕೆಂದು ಮತ್ತೊಂದು ಕಾಲುವೆ ಮಾಡಿ ನದಿಗೆ ಜೋಡಿಸುವ ಕೆಲಸವೂ ನಡೆಯಿತು. ಎಲ್ಲಾ ಯೋಜನಾಬದ್ಧವಾಗಿ ನಡೆಯಿತು. ಗಿಡಗಳು ಕ್ರಮೇಣ ಇವರ ಪರಿಶ್ರಮಕ್ಕೂ ಪ್ರೀತಿಗೂ ಒಲಿದವು. ಬೆಳೆದು ನಿಂತವು. ಫಲ ಕೈಗೆ ಬರುವ ಹೊತ್ತಿಗೆ ನಿಧಾನವಾಗಿ ಮಳೆಗಾಲ ಕಾಲಿಟ್ಟಿತು. ಮಲೆನಾಡಿನ ಪ್ರದೇಶವಾಗಿದ್ದು, ಸುತ್ತಮುತ್ತ ಕಾಡೇ ಇದ್ದರಿಂದ ಮಳೆ ಆಕಾಶದ ಪರದೆ ಹರಿದು ಭೋರ್ಗರೆಯಿತು.

ಜಂಪಯ್ಯನ ಮನೆಯ ಮಾಡಿನ ಸಂದುಗಳಿಂದ ಮಳೆನೀರು ಒಳಗೆ ಸುರಿಯತೊಡಗಿದಾಗ ಜಂಪಯ್ಯ, ಸೋರುವಲ್ಲಿ ಪಾತ್ರೆಗಳನ್ನು ಹಿಡಿದು ಕುಳಿತ. ಕ್ರಮೇಣ ಆ ಪ್ರಯತ್ನ ನಿರುಪಯುಕ್ತವೆನಿಸಿ ಹತಾಶೆಯಿಂದ ಕೈ ಚೆಲ್ಲಿದ. ಏನು ಮಾಡಬೇಕೆಂದೇ ತೋಚದೇ ಮನೆ ಒಳಗೂ ಹೊರಗೂ ಅಸಹಾಯಕತೆಯಿಂದ ಅಡ್ಡಾಡತೊಡಗಿದ. ಆಗಾಗ ಕಾಡಿನ ಕಡೆಯಿಂದ ಬೀಸಿ ಬರುವ ಕುಳಿರ್ಗಾಳಿ, ಒಮ್ಮೆ ತೀವ್ರ, ಒಮ್ಮೆ ಸಾಧಾರಣ, ಮತ್ತೊಮ್ಮೆ ಜಡಿಮಳೆ ನಿಲ್ಲಿಸುವ ಮಾತೇ ಇಲ್ಲವೇನೋ ಎನ್ನುವಂತೆ. ಮಳೆ ಕೂಡಾ ಸಂಗೀತದ ಮಂದ್ರ, ಮಧ್ಯಮ, ತಾರಕದೊಂದಿಗೆ ಸ್ಪರ್ಧೆಗಿಳಿದಂತಿತ್ತು. ಗಾಳಿಗೆ ದೀಪದ ಸೊಡರೂ ಸೊಲ್ಲೆತ್ತುವಂತಿರಲಿಲ್ಲ. ಹಾಗಾಗಿ ಅದೂ ಕೂಡಾ ಸೋತು ಶರಣಾಗತವಾದಾಗ ಕತ್ತಲಲ್ಲಿ ಪ್ರಕ್ರತಿಯ ಭೀಕರತೆಯ ಪರಿಚಯವೂ ಆಗಿ, ಅದೇಕೋ ಮೊದಲ ಬಾರಿಗೆ ಅಲ್ಲಿ ಬಂದು ನಿಲ್ಲುವ ನಿರ್ಧಾರದ ಬಗ್ಗೆ ಮರುಯೋಚಿಸುವಂತಾಗಿತ್ತು.

ಕಾಯಕನಾಥನ ಜಗುಲಿಕಟ್ಟೆಯೂ ಅಡ್ಡಮಳೆಗೆ ತೋಯ್ದು ಹೋಗಿ ಅವನು ಒಂದು ಮೂಲೆಯಲ್ಲಿ ಚಳಿಯಲ್ಲಿ ನಡುಗಿ ಮುದುರಿ ಕುಳಿತುಕೊಂಡ. ಮನೆಯೊಳಗಿನ ಒಲೆಯೊಳಗೂ ನೀರು ಹರಿದು ಅದೂ ಥಂಡಿ ಹಿಡಿದುಬಿಟ್ಟಿತು. ಶೇಖರಿಸಿಟ್ಟಿದ್ದ ಕಟ್ಟಿಗೆಯನ್ನು ಮೊದಲು ನೀರು ಬೀಳದೆಡೆ ಎತ್ತಿಟ್ಟರೂ ಅದನ್ನು ಉರಿಸಲು ಜಾಗವೇ ಇರದಂತಾಗಿತ್ತು. ಸ್ವಲ್ಪ ದೂರದಲ್ಲಿದ್ದ ಶಿವಯ್ಯ ಮಳೆ ನಿಂತಾಗ ಬಂದು ಇವರ ಪರಿಸ್ಥಿತಿ ನೋಡಿ ಮರುಕ ತೋರಿಸಿದ.

'ಎಲ್ರೂ ಕಾರಗದ್ದೆಗೆ ಹೋಗಿ ಬಿಡೋಣ್ವಾ..? ಮಳೆ ನಿಂತ ಮೇಲೆ ಬಂದ್ರಾಯ್ತು.. ನನ್ನ ಮಗ ವೀರಭದ್ರನಿಗೆ ಹೇಳ್ತೀನಿ.. ಅವನು ನಮ್ಗೆ ಉಳಿಯಲು ಏನಾದರೂ ವ್ಯವಸ್ಥೆ ಮಾಡಿ ಕೊಡುವನು..'

ಜಂಪಯ್ಯನ ಮನಸ್ಸು ಡೋಲಾಯಮಾನ ವಾಗಿತ್ತು. ಮಳೆಯ ದರ್ಶನಕ್ಕೆ ಅವನ ನಿರ್ಧಾರ ಬುಡಮೇಲಾಗಿತ್ತು.

'ಇಲ್ಲಿ ದಿನ ಕಳೆಯೋದು ಯೋಚಿಸಿದಷ್ಟು ಸುಲಭ ಅಲ್ಲ.. ಈ ಥಂಡಿಗೆ ಸತ್ತೇ ಹೋಗಬೇಕಾದೀತು..'

ಮನೆಯೊಳಗೆ ಕೆರೆಗಟ್ಟಿದ್ದ ನೀರನ್ನು ಒಂದು ತಾಟಿನಿಂದ ಹೊರಗೆ ಚೆಲ್ಲುತ್ತ ನುಡಿದ ಜಂಪಯ್ಯ. ಕಾಯಕನಾಥನೂ ಚಳಿಗೆ ಮರಗಟ್ಟಿ ಹೋಗಿದ್ದ. ನೀರು ಖಾಲಿಯಾದಂತೇ ಮತ್ತೆ ಸುರಿವ ಮಳೆ ಮನೆಯೊಳಗೆ ಸೋರಿ ಸುರಿದು, ಹರಿದು ಇವರ ಸ್ಥೈರಣೆ ಪರೀಕ್ಷಿಸುವಂತಿತ್ತು. ಕಾಡು, ಕತ್ತಲು, ಮಳೆ, ಗಾಳಿಯಂಥ ಪ್ರಾಕೃತಿಕ ಸಂಗತಿಗಳ ವಿರುದ್ಧ ಮನುಷ್ಯ ಏನೂ ಅಲ್ಲ ಎನ್ನುವ ಸತ್ಯ ಎಲ್ಲರಿಗೂ ಮನವರಿಕೆಯಾಗಿತ್ತು. ಶಿವಣ್ಣ ಬೆಳಕಾದೊಡನೆ ಹೊರಟು ನಿಂತ. ರತ್ನವ್ವ ಆಗಲೇ ಗಂಟುಮೂಟೆ ಕಟ್ಟಿ ತಯಾರಾಗಿ ನಿಂತಿದ್ದಳು. ಜಂಪಯ್ಯ ಇನ್ನೂ ಹೊರಡುವ ಮನಸ್ಸು ಮಾಡಿರಲಿಲ್ಲ.

ಶಿವಣ್ಣ ಬಂದು ಜಂಪಯ್ಯನ ಮನೆ ಬಾಗಿಲಲ್ಲಿ ನಿಂತ. 'ಏನು ಜಂಪಣ್ಣ.. ಬರಲ್ವಾ..?'

'ಇಲ್ಲ ಶಿವಯ್ಯ.. ಒಂದು ಸಲ ಬಿಟ್ಟು ಬಂದಿದ್ದೀನಿ.. ಮತ್ತೆ ಅಲ್ಲಿಗೆ ಬರಲ್ಲ.. ಬದುಕಿದದ್ದರೂ ಇಲ್ಲೇ ಸತ್ತರೂ ಇಲ್ಲೇ..' ಎಂದ. ಶಿವಯ್ಯ ಅಚ್ಚರಿಯಿಂದ ಜಂಪಯ್ಯನ ಮುಖ ನೋಡಿದ.

'ಒಂದು ಮಳೆಗೆ ಹೇಗಾಗಿದೆ ಪರಿಸ್ಥಿತಿ ಗೊತ್ತಲ್ವಾ..? ಇಲ್ಲಿದ್ದರೆ ಸತ್ತೇ ಹೋಗ ಬೇಕಾದೀತು.. ನಮ್ಮ ಗಿಡಗಳು ಈ ಮಳೆಗೆ ಉಳೀತಾವಾ..ಹೇಳು..? ನೀರು ಅಲ್ಲಿ ಮಡುಗಟ್ಟಿ ನಿಂತಿದೆ.. ಕೊಳೆತು ಹೋಗುತ್ತವೆ.. ಹುಳ ಹಿಡಿಯುತ್ತವೆ.. ಅದು ಫಲ ಬಿಡುವುದಿಲ್ಲ.. ಎಲ್ಲಾ ಶ್ರಮ ನೀರಲ್ಲಿ ಹೋಮ ಮಾಡಿದ ಹಾಗಾಗುತ್ತೆ.. ನೀರಿನ ತೊಟ್ಟಿನೂ ತುಂಬಿ ತುಳುಕುತ್ತಿದೆ.. ದೊಡ್ಡ ಕೆರೆ ಥರ ಆಗಿದೆ.. ಇಲ್ಲಿರೋದೂ ಒಂದೇ.. ಆತ್ಮಾಹುತಿ ಮಾಡಿಕೊಳ್ಳುವುದೂ ಒಂದೇ.. ಬದುಕುಳಿದರೆ ಬೇಡಿಯಾದರೂ ತಿನ್ನಬಹುದು.. ಇದನ್ನು ನಂಬಕೊಂಡು ಬದುಕಲು ಅಸಾಧ್ಯ ಜಂಪಯ್ಯ.. ಭಾವನಾತ್ಮಕವಾಗಿ ಯೋಚಿಸುವ ಸಮಯ ಇದಲ್ಲ.. ಸ್ವಲ್ಪ ವಿವೇಚನೆಯಿಂದ ಆಲೋಚನೆ ಮಾಡು..'

ಜಂಪಯ್ಯ ಕಾಯಕನಾಥನ ಮುಖ ನೋಡಿದ. ಅವನ ಮುಖ ಎಂದಿನಂತೆ ನಿರ್ವಿಕಾರವಾಗಿತ್ತು. ಜಂಪಯ್ಯ ಆಗಲೇ ಅವನ ಇರಾದೆ ಪ್ರಶ್ನಿಸಿದ್ದ. ಕಾಯಕನಾಥ ಖಡಾಖಂಡಿತವಾಗಿ ತಿಳಿಸಿದ್ದ, 'ನಾನೆಲ್ಲೂ ಬರುವುದಿಲ್ಲ.. ನೀನು ಬೇಕಾದರೆ ಶಿವಯ್ಯನ ಜೊತೆ ಹೊರಡು.. ' ಕಾಯಕನಾಥನ ನಿರ್ಧಾರ ಬದಲಾಗದೆಂದು ಜಂಪಯ್ಯನಿಗೆ ತಿಳಿದಿತ್ತು. ಇಷ್ಟೆಲ್ಲಾ ಬದಲಾವಣೆಗಳನ್ನು ಅಜ್ಜರಕಾಡಿನಲ್ಲಿ ತಾನೇ ತಂದು, ಈಗ ಎಲ್ಲವನ್ನೂ ತ್ಯಜಿಸಿ ಹೋಗುವುದು ಅವನಿಗೂ ಮನಸ್ಸು ಬರಲಿಲ್ಲ. ಅವನೂ ಆಗಲೇ ನಿರ್ಧರಿಸಿದ್ದ.

'ಇಲ್ಲಿ ಮನೆ ಕಟ್ಟುವ ಜೊತೆ ಜೊತೆಗೆ.. ತುಂಬಾ ಕನಸು ಕಟ್ಟಿದ್ದೀನಿ.. ಒಂದು ರಾತ್ರಿಯ ಮಳೆ, ನನ್ನ ನಿರ್ಧಾರ, ಸಂಕಲ್ಪ, ಕನಸುಗಳನ್ನು ಕೊಚ್ಚಿ ಹೋಗುವಷ್ಟು, ನನ್ನ ನಿರ್ಧಾರ ದುರ್ಬಲ ಅಲ್ಲ.. ಯಾವುದೂ ಈ ಪ್ರಪಂಚದಲ್ಲಿ ಸುಲಭ ಸಾಧ್ಯವಾಗಿ ಸಾಧಿಸಲು ಆಗಲ್ಲ.. ಆ ಬಂಡೆಗಲ್ಲಾದರೂ ಬಿಸಿಲು, ಮಳೆ ಎಲ್ಲಾ ವಾತಾವರಣಕ್ಕೆ ಒಂದೇ ಸಮನೆ ಮುಖ ಮಾಡಿ ನಿಂತೇ ಗಟ್ಟಿಯಾಗಬೇಕು.. ಮರ ಕೂಡಾ ಎಲ್ಲಾ ಪರಿಸ್ಥಿತಿಗಳನ್ನು ಎದುರಿಸಿಯೂ ಹಣ್ಣು ಕೊಡಬೇಕು.. ಬದುಕು ಸಿಹಿಯೆನಿಸುವುದು ಇಂಥ ಎಡರುತೊಡರುಗಳನ್ನು ಎದುರಿಸಿ ದಾಟಿದ ಬಳಿಕವೇ.. ಫಲ ಹಣ್ಣಾಗುವ ಮುನ್ನ ಕಾಯಿ.. ಒಗರು.. ನಂತರ ಮಾಗಿ ಸಿಹಿ.. ಕಷ್ಟನೋ.. ಸುಖನೋ.. ಇದೇ ನನ್ನ ಕರ್ಮಭೂಮಿ.. ಇದನ್ನು ಬಿಟ್ಟು ನಾನೆಲ್ಲೂ ಬರಲ್ಲ..' ನುಡಿದಾಗ ಜೋಳಿಗೆ ಹಿಡಿದು ಸ್ಪಷ್ಟವಾಗಿ ಹೊರಟಿದ್ದ ಶಿವಯ್ಯ ಮತ್ತು ರತ್ನ ಮುಖ ಮುಖ ನೋಡಿಕೊಂಡರು.

'ಮಳೆಗಾಲದಲ್ಲಿ ಮಾಡೋದೇನು..? ಹೊಟ್ಟೆಗೆ ಏನು ತಿನ್ನೋದು..? ನಾವು ನೆಟ್ಟ ಗಿಡಗಳಲ್ಲಿ ಚಿಗುರಿದ ಫಲಗಳು ಈ ರೀತಿ ಮಳೆಗೆ ಕೊಳೆರೋಗ ಬಂದು ಹಾಳಾಗುತ್ತೆ..'

(ಸಶೇಷ)




## ಬಹಿರಂಗ

ಯಾರಿಗೂ ಬೇಕಿಲ್ಲ ಸ್ವಚ್ಛ ಮನಸ್ಸು
ತೆಳ್ಳಗೆ ಬೆಳ್ಳಗೆ ಇದ್ದರೆ ಎಲ್ಲರಿಗೂ ಹುಮ್ಮಸ್ಸು!
ಹೊರಗೆ ಕಾಣುವ ವೇಷಭೂಷಣವ ನೋಡಿ ಅಳೆಯುವರು
ಒಳ ಮನಸಿನ ಸೌಂದರ್ಯ ಕಾಣದವರು!
ಆಸ್ತಿ ಅಂತಸ್ತು ನೋಡಿ ಮಣೆ ಹಾಕುವರು
ನೇರ ಮಾತು ಪ್ರೀತಿ ವಾತ್ಸಲ್ಯ ಕೇಳುವವರು ಯಾರು?
ವಿದ್ಯೆ ಜಾಣತನ ಹಿಂದಿನ ಕಥೆ ಕೇಳಲು ಸಮಯವಿಲ್ಲ
ಇಂದಿನ ದಿನವೇ ಜೀವನ ಎಂದು ತಿಳಿದವರೇ ಎಲ್ಲಾ!
ಬಹಿರಂಗ ತೋರಿಕೆಯ ಬದುಕೇ ನಡೆಯುವುದು ಜಗದಲ್ಲಿ
ಅಂತರಂಗದ ಒಳ್ಳೆಯತನ ಕಾಣುವುದು ಕೆಲವರ ಕಣ್ಣಲ್ಲಿ!

— ವಿಜಯಲಕ್ಷ್ಮಿ ಶಿವರಾಂ